**Class: Shastri-II Sem: III Paper: III Sub: Kannada Paper code: 1173**

**Text Book:** ನುಡಿ ಸಂಪದ ೩ - ಕನ್ನಡ ಭಾಷಾ ಪಠ್ಯ ಪುಸ್ತಕ

ಆಧುನಿಕ ಯುಗದ ಈ ಸಂದರ್ಭದಲ್ಲಿ ಕನ್ನಡ ಭಾಷೆಯು ವಿವಿಧ ವಲಯಗಳಲ್ಲಿ ಅನೇಕ ಪ್ರಕಾರವಾಗಿ ಬಳಕೆಯಾಗುತ್ತಿದೆ. ಮಾಧ್ಯಮಗಳಲ್ಲಿ, ಪತ್ರಿಕೆಗಳಲ್ಲಿ ಕನ್ನಡವು ವೈವಿಧ್ಯವಾಗಿ ಬಳಕೆಯಾಗುತ್ತಿದೆ. ಈ ಹೊಸ ವಿದ್ಯಮಾನಗಳಿಗೆ ವಿದ್ಯಾರ್ಥಿಗಳು ಪದವಿ ಹಂತದಲ್ಲಿ ಅನುಭವಗಳನ್ನು ಪಡೆದುಕೊಳ್ಳಬೇಕಾಗಿದೆ. ಈ ಎಲ್ಲಾ ಅನಿವಾರ್ಯತೆ ಮತ್ತು ಅಗತ್ಯತೆಯ ಹಿನ್ನೆಲೆಯಲ್ಲಿ ಪಠ್ಯಪುಸ್ತಕ ರೂಪುಗೊಂಡಿದೆ.

- ❖ ವಿದ್ಯಾರ್ಥಿಗಳಿಗೆ ಕಲಿಸುವ ಸಮಕಾಲೀನ ಪಠ್ಯಗಳು ಅವರನ್ನು ಯಾಂತ್ರಿಕ ಪ್ರವೃತ್ತಿಯಿಂದ ದೂರ ಮಾಡಿ ವ್ಯಕ್ತಿತ್ವ ರೂಪಿಸುವ ನೆಲೆಯಲ್ಲಿರುವಂತೆ ರೂಪಿತಗೊಂಡಿದೆ.
- ❖ ವ್ಯಕ್ತಿತ್ವದ ವಿಭಿನ್ನ ಆಯಾಮಗಳನ್ನು, ಮಾದರಿಗಳನ್ನು ತೋರಿಸುವ ಮತ್ತು ತಮ್ಮ ವ್ಯಕ್ತಿತ್ವವನ್ನು ಹೇಗೆ ಗಟ್ಟಿಗೊಳಿಸಿಕೊಳ್ಳಬೇಕೆಂಬ ಅರಿವನ್ನು ಇಟ್ಟುಕೊಂಡು ಪಠ್ಯವನ್ನು ಸಿದ್ಧಪಡಿಸಲಾಗಿದೆ.
- ❖ ಪ್ರಾತಿನಿಧಿಕವಾಗಿ ಆಯ್ಕೆ ಮಾಡಿಕೊಂಡ ಒಟ್ಟು ಪಠ್ಯದಲ್ಲಿ ವ್ಯಕ್ತಿತ್ವ ನಿರ್ಮಾಣದ ಭಿನ್ನ ಭಿನ್ನ ಆಲೋಚನಾ ಕ್ರಮಗಳನ್ನು ತಿಳಿಸುವ ಪ್ರಯತ್ನವಿದೆ.
- ❖ ಸಮಕಾಲೀನ ಒತ್ತಡದ ದಿನಮಾನಗಳಲ್ಲಿ ವಿದ್ಯಾರ್ಥಿಗಳು ತಮ್ಮ ವ್ಯಕ್ತಿತ್ವವನ್ನು ಹೇಗೆ ರೂಪಿಸಿಕೊಳ್ಳಬೇಕೆಂಬ ನೆಲೆಯನ್ನು ಪಠ್ಯಪುಸ್ತಕದಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

**Class: Shastri-II Sem: IV Paper: III Sub: Kannada Paper code: 2173**

**Text Book:** ನುಡಿ ಸಂಪದ ೪ - ಕನ್ನಡ ಭಾಷಾ ಪಠ್ಯ ಪುಸ್ತಕ

'ಕನ್ನಡ' ಎನ್ನುವುದು ಭಾಷಾ ಸೂಚಕ, ಜನಾಂಗ ಸೂಚಕ ಮತ್ತು ಪ್ರದೇಶ ಸೂಚಕವೂ ಹೌದು; ಒಂದು ಬದುಕು, ಒಂದು ಸಂಸ್ಕೃತಿಯ ಸೂಚಕವೂ ಹೌದು. 'ಕನ್ನಡ' ಎನ್ನುವುದನ್ನು ಯಾವುದಾದರೊಂದು ಅರ್ಥಕ್ಕೆ ಸೀಮಿತಗೊಳಿಸಿ ಮಾತಾಡುವುದು, ವಿಶ್ಲೇಷಿಸುವುದು, ವ್ಯಾಖ್ಯಾನಿಸುವುದು ಅದರ ವಿಶಾಲತೆಯನ್ನು ಸಂಕುಚಿತಗೊಳಿಸಿದಂತಾಗುತ್ತದೆ. ಹಾಗಾಗಿಯೇ 'ಕನ್ನಡ'ವನ್ನು ಅದರ ವಿಸ್ತಾರತೆಯೊಂದಿಗೆ, ಹಲವು ಸಾಧ್ಯತೆಗಳೊಂದಿಗೆ ನಾವು ಅರ್ಥೈಸಿಕೊಳ್ಳಬೇಕಿದೆ.

- ❖ ಕನ್ನಡ ಸಾಹಿತ್ಯ ಈ ವೈಶಿಷ್ಟ್ಯವನ್ನು ದಾಖಲು ಮಾಡಿದೆ. ಇದನ್ನು ಸ್ಥೂಲವಾಗಿ ಗ್ರಹಿಸುವ ನೆಲೆಯಲ್ಲಿ ಕನ್ನಡದ ಸಾಧ್ಯತೆಗಳು ಭಾಗವನ್ನು ರೂಪಿಸಲಾಗಿದೆ.
- ❖ ಭಾಷೆ ಮತ್ತು ನಾಡಿನ ವಿವಿಧತೆಯನ್ನು ಸೂಚಿಸುವ ನಿಟ್ಟಿನಲ್ಲಿ ಅಧ್ಯಾಯಗಳು ರೂಪುಗೊಂಡಿವೆ.
- ❖ ಸಾಹಿತ್ಯ ಸಂಸ್ಕೃತಿಯ ಅನೇಕ ಆಯಾಮಗಳನ್ನು ಸಶಕ್ತವಾಗಿ ಹೊಮ್ಮಿಸುವ ಮಾದರಿಯನ್ನು ಕಟ್ಟಿಕೊಡಲಾಗಿದೆ.
- ❖ ಗಾದೆಗಳು, ಒಗಟುಗಳು, ಮಿನಿಕತೆಗಳು, ಚುಟುಕುಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಪ್ರಯತ್ನ ಮಾಡಲಾಗಿದೆ.
- ❖ ವಿದ್ಯಾರ್ಥಿಗಳಿಗೆ ತರಗತಿಗಳಲ್ಲಿ ಚರ್ಚೆ ಮತ್ತು ಸಂವಾದಕ್ಕೆ ಅನುಕೂಲವಾಗುವಂತೆ ಪಠ್ಯವಿಷಯಗಳು ಅಳವಡಿಕೆಗೊಂಡಿವೆ.
- ❖ ವಿದ್ಯಾರ್ಥಿಗಳಿಗೆ ಮಾಧ್ಯಮಗಳಲ್ಲಿ, ಪತ್ರಿಕೆಗಳಲ್ಲಿ ಬಳಕೆಯಾಗುವ ಕನ್ನಡ ಹೇಗಿರಬೇಕು ಹಾಗೂ ಸಾಮಾಜಿಕ ವ್ಯವಹಾರಗಳಿಗೆ ಹೇಗೆ ಪ್ರತಿಸ್ಪಂದಿಸಬೇಕು ಎನ್ನುವ ನಿಟ್ಟಿನಲ್ಲಿ ಪುಸ್ತಕವನ್ನು ವಿನ್ಯಾಸಗೊಳಿಸಲಾಗಿದೆ.